ಶ್ರೀ ಡಿ.ಬಿ. ಇನಾಂದಾರ್(ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ)ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಒಟ್ಟು 35,095 ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳನ್ನು ನೀಡಲಾಗಿದೆ. ಅಂದರೆ ದಿನಾಂಕ 31.3.98 ರವರಗೆ 29,610 ಹಾಗೂ 1.4.98 ರಿಂದ 31.3.99ರ ಅವಧಿಯಲ್ಲಿ 5485 ಒಟ್ಟು 35,095 ಹಸಿರು ಪಡಿತರ ಚೀಟಿಗಳನ್ನು ನೀಡಲಾಗಿದೆ.

ಆ)ಹಸಿರು ಪಡಿತರ ಚೀಟಿ ವಿತರಣೆಯಾಗದಿರುವ ಹಾಗೂ ಅರ್ಹ ಕುಟುಂಬಗಳನ್ನು ಗುರುತಿಸುವ ಯೋಜನೆಯನ್ನು ಸರ್ಕಾರ ಹಮ್ಮಿಕೊಂಡಿಲ್ಲ. ಆದರೆ ಸರ್ಕಾರದ ಆದೇಶ ಸಂ. ಎಫ್‌ಸಿಎಸ್.6. ಡಿಆರ್‌ಎ.2000 ದಿನಾಂಕ 1.2.2000ದಲ್ಲಿ ಪಡಿತರ ಚೀಟಿಗಳ ವಿತರಣೆಯನ್ನು ಸರಿಳೀಕೃತ ಆದೇಶದಂತೆ ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸುವವರು ನಿಗಧಿತ ಅರ್ಜಿ ನಮೂನೆಯೊಂದಿಗೆ ತಮ್ಮ ವಾಸಸ್ಥಳದ ಬಗ್ಗೆ ದೃಢೀಕರಣದಾಖಲಾತಿಗಳನ್ನು ಒದಗಿಸಬೇಕಿರುತ್ತದೆ. ಹಸಿರು ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸುವವರು ಅರ್ಜಿಯೊಂದಿಗೆ ಆದಾಯಪ್ರಮಾಣ ಪತ್ರ ಸಲ್ಲಿಸಬೇಕಿರುತ್ತದೆ. ಈ ಅರ್ಜಿಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಅರ್ಹರಿಗೆ 30 ದಿನಗಳೊಳಗಾಗಿ ಪಡಿತರಚೀಟಿಯನ್ನು ಅರ್ಹತೆಯ ಆಧಾರದ ಮೇಲೆ ನೀಡಲಾಗುವುದು.

ಪಿರಿಯಾ ಪಟ್ಟಣ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಗಳು

2673 (3273)ಶ್ರೀ ಹೆಚ್.ಸಿ. ಬಸವರಾಜು: ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಮೈಸೂರು ಜಿಲ್ಲೆ ಪಿರಿಯಾ ಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳಿವೆ. ಎಂದು ಪ್ರಾರಂಭಿಸಲಾಯ್ತು: ಈ ಯೋಜನೆಗಳು ಜಾರಿಯಲ್ಲಿ ಇವೆಯೇ :

ಆ)ಇಲ್ಲದೆ ಇದ್ದರೆ ಅದಕ್ಕೆ ಕಾರಣಗಳೇನು :

ಇ)ಈ ಯೋಜನೆಗಳಿಂದ ಕೆ.ಪಿ.ಟಿ.ಸಿ.ಎಲ್ ಗೆ ಎಷ್ಟು ಹಣ ಬಾಕಿ ಇದೆ ಮತ್ತು ಎಂದಿನಿಂದ ಈ ಬಾಕಿ ಇದೆ;

ಈ)ಹಣ ಪಾವತಿಸಿ ರೈತರಿಗೆ ನೀರು ಒದಗಿಸುವುದು ಎಂದು?

ಶ್ರೀ ಎಸ್.ಕುಮಾರ್ ಬಂಗಾರಪ್ಪ(ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ)ಈ ಕೆಳಕಂಡ ಎರಡು ಯೋಜನೆಗಳುಮಾತ್ರಇದ್ದು, ಅವುಗಳನ್ನು 1978ರಲ್ಲಿ ಪ್ರಾರಂಭಿಸಲಾಗಿದೆ. ಈಗ ಅವು ಸ್ಥಗಿತಗೊಂಡಿವೆ.

1. ಗಿರಗೂರು ಏತನೀರಾವರಿ ಯೋಜನೆ.

2. ದೊಡ್ಡ ಹೊಸೂರು ಏತನೀರಾವರಿ ಯೋಜನೆ.

ಆ)ವಿದ್ಯುಚ್ಛಕ್ತಿ ಬಿಲ್ಲನ್ನು ಪಾವತಿಸದ ಕಾರಣವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ.

ಇ) ಈ ಯೋಜನೆಗಳಿಂದ ಕೆ.ಪಿ.ಟಿ.ಸಿ.ಎಲ್.ಗೆ ರೂ: 1, 12, 225.00ಗಳು ಎರಡು ವರ್ಷಗಳಿಂದ ಬಾಕಿ ಇರುತ್ತದೆ.

ಈ) ಮುಂದಿನ ತಿಂಗಳುಗಳಲ್ಲಿ ಬಾಕಿ ಇರುವ ಹಣವನ್ನು ಸಂದಾಯ ಮಾಡಿ ಆದಷ್ಟು ಬೇಗನೆ ಈ ಯೋಜನೆಯಿಂದ ರೈತರಿಗೆ ನೀರು ಒದಗಿಸಲು ಕ್ರಮ ಕೈ ಗೊಳ್ಳಲಾಗುವುದು.

ಚಳ್ಳಕೆರೆ ತಾಲ್ಲೂಕಿನ ಕೆರೆಗಳ ಹೂಳು ಎತ್ತುವ ಬಗ್ಗೆ

2674 (3262) ಶ್ರೀ ಬಸವರಾಜ್ ಮಂಡಿಮಲ್ ಬಿ. (ಚಳ್ಳಕೆರೆ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಚಳ್ಳಕೆರೆ ತಾಲ್ಲೂಕಿನ ಯಾವ ಕೆರೆಗಳ ಹೂಳು ಎತ್ತಲಾಗಿದೆ; (ವಿವರ ನೀಡುವುದು)

ಆ) ಪ್ರತಿ ಕೆರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ; (ವರ್ಷವಾರು ವಿವರ)

ಇ) ಖರ್ಚಾದ ಹಣಕ್ಕೆ ಅನುಗುಣವಾಗಿ ಸದರಿ ಹೂಳೆತ್ತುವ ಕಾರ್ಯಕ್ರಮ ನಡೆದಿದೆಯೇ;

ಈ) ಇಲ್ಲದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ವಿವರಗಳು ಈ ರೀತಿ ಇವೆ : 1997-98 - ಯಾವುದೂ ಇಲ್ಲ
1988-99 - ಸಾಣೆಕೆರೆ
99-2000 - ಸಾಣೆಕೆರೆ

ಆ) <u>ಸಾಣೆಕೆರೆ</u>
1998-99 - 8,96,766 ಲಕ್ಷ ರೂಗಳು
99-2000- 53,234 - ''-

ಇ) ಹೌದು.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಚಳ್ಳಕೆರೆ ತಾಲ್ಲೂಕಿನ ರಾಣೇಕೆರೆ ಫೀಡರ್ ಚಾನಲ್ ದುರಸ್ತಿ

2676 (3264) ಶ್ರೀ ಬಸವರಾಜ್ ಮಂಡಿಮತ್.ಜಿ.(ಚಳ್ಳಕೆರೆ): ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಳ್ಳಕೆರೆ ತಾಲ್ಲೂಕಿನ ರಾಣೇಕೆರೆ ಫೀಡರ್ ಚಾನಲ್ ದುರಸ್ತಿಗೆ ಕಳೆದ 3 ವರ್ಷಗಳಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ; (ಪ್ರತಿ ವರ್ಷದ ಖರ್ಚನ್ನು ಪ್ರತ್ಯೇಕ ನೀಡುವುದು)

ಆ) ಈಗಲೂ ಸಹ ಸದರಿ ಚಾನಲ್ ಮುಖಾಂತರ ನೀರು ರಾಣೇಕೆರೆಗೆ ಹರಿಯುತ್ತಿಲ್ಲವೆಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;